





ದಿನಾಂಕ:27-06-23ರಂದು ವಿಧಾನಸೌಧದ ಬ್ಯಾಂಕಟ್ ಹಾಲ್‌ನಲ್ಲಿ ನಡೆದ ನಾಡಪ್ರಭು ಕೆಂಪೇಗೌಡರ 514ನೇ ಜಯಂತೋತ್ಸವ ಕಾರ್ಯಕ್ರಮದಲ್ಲಿ ಮಾನ್ಯ ಸಭಾಪತಿ ಬಸವರಾಜ ಹೊರಟ್ಟಿ ಅವರು ಭಾಗವಹಿಸಿ ಉತ್ತರ ಕರ್ನಾಟಕದ ನಾವೆಲ್ಲ ಶಾಸಕರಾಗಿ ಮಂತ್ರಿಯಾಗಿ ಸಭಾಪತಿಯಾಗಿ ಬೆಂಗಳೂರಿಗೆ ಬರಲು ನಾಡಪ್ರಭು ಕೆಂಪೇಗೌಡರೇ ಕಾರಣ. ಇಡೀ ಜಗತ್ತಿನಲ್ಲಿ ಬೆಂಗಳೂರಿಗೆ ತನ್ನದೇ ಆದ ವಿಶೇಷ ಸ್ಥಾನ ಇದೆ. ಅಂತಹ ಸುಂದರ ಸುಸಜ್ಜಿತ ನಗರವನ್ನು ದೂರ ದೃಷ್ಟಿ ಇಟ್ಟುಕೊಂಡು ಕಟ್ಟಿದ ಕೀರ್ತಿ ಗೌರವಾನ್ವಿತ ನಾಡಪ್ರಭು ಕೆಂಪೇಗೌಡರಿಗೆ ಸಲ್ಲುತ್ತದೆ. ಎಂದು ಹೇಳಿ ಕೆಂಪೇಗೌಡರ ಆದರ್ಶ ಕಾರ್ಯ ಕ್ಷಮತೆ ಅವರ ದೂರದೃಷ್ಟಿ ಕುರಿತು ಸುಧೀರ್ಘವಾಗಿ ತಮ್ಮ ಮನದಾಳದ ಮಾತುಗಳನ್ನು ಹೇಳಿದರು. ಈ ಸಂದರ್ಭದಲ್ಲಿ ಪೂಜಶ್ರೀಗಳು, ಮಾನ್ಯ ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್, ಮಂತ್ರಿಗಳು, ಸಂಸದರು, ಶಾಸಕರು ಸೇರಿದಂತೆ ಕೆಂಪೇಗೌಡರ ಅಪಾರ ಅಭಿಮಾನಿಗಳು ಉಪಸ್ಥಿತರಿದ್ದರು